ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	660
ಮಾನ್ಯ ಸದಸ್ಯರ ಹೆಸರು	ಶ್ರೀ ಶಾಂತರಾಮ್ ಬುಡ್ನ ಸಿದ್ದಿ(ನಾಮನಿರ್ದೇಶನ)
ಉತ್ತರಿಸಬೇಕಾದ ದಿನಾಂಕ	17.12.2021
ಉತ್ತರಿಸುವ ಸಚಿವರು	ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಉನ್ನತ ಕನ್ನಡ ಜಿಲ್ಲೆಯ ಕುಂಬ್ರಿ ಮಾರಾಠಿ ಸಮುದಾಯಕ್ಕೆ ಯಾವ ವರ್ಗದಡಿ ಜಾತಿ ಪ್ರಮಾಣ ಪತ್ರ ನೀಡಲಾಗುತ್ತಿದೆ;	ಸರ್ಕಾರದ ಆದೇಶ ಸಂಖ್ಯೆ:ಸಕಇ 225 ಬಿಸಿಎ 2000, ದಿನಾಂಕ:30.03.2000ರ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿನ ಪ್ರವರ್ಗ-1 ಕ್ರಮ ಸಂಖ್ಯೆ:31ರಲ್ಲಿ ಕುಂಬ್ರಿ ಮರಾಠಿ (ಉತ್ತರ ಕನ್ನಡ ಜಿಲ್ಲೆ) ಜಾತಿ ಸೇರಿರುತ್ತದೆ. ಕುಂಬ್ರಿ ಮರಾಠಿ ಜಾತಿ ಪ್ರವರ್ಗ-1ರಡಿ ಜಾತಿ ಪ್ರಮಾಣ ಪತ್ರ ಪಡೆಯಲು ಅರ್ಹತೆ ಹೊಂದಿದೆ. ಪ್ರವರ್ಗ-1ರಲ್ಲಿ ಬರುವ ಜಾತಿಗಳಿಗೆ ಶೇಕಡ 4ರಷ್ಟು ಮೀಸಲಾತಿಯನ್ನು ನಿಗದಿಪಡಿಸಲಾಗಿದೆ.
ಆ)	ಹಾಗೆ ನೀಡುವ ಜಾತಿ ಪ್ರಮಾಣ ಪತ್ರವು ಯಾವ ಯಾವ ಮೀಸಲಾತಿಗೆ ಉಪಯೋಗವಾಗುತ್ತಿದೆ;	ಕುಂಬ್ರಿ ಮರಾಠಿ ಜಾತಿಯು, ಕರ್ನಾಟಕ ಸರ್ಕಾರದ ವ್ಯಾಪ್ತಿಯಲ್ಲಿ ಬರುವ ವಿದ್ಯಾಸಂಸ್ಥೆಗಳಲ್ಲಿ ಪ್ರವೇಶ ಮತ್ತು ಉದ್ಯೋಗ ನೇಮಕಾತಿಗಳಲ್ಲಿ ಮೀಸಲಾತಿ ಸೌಲಭ್ಯ ಪಡೆಯಲು ಅರ್ಹರಿರುತ್ತಾರೆ.
ಇ)	ಈ ಸಮುದಾಯಕ್ಕೆ ರಾಜಕೀಯ ಮೀಸಲಾತಿ ನೀಡಲಾಗುತ್ತಿದ್ದೆಯೇ?(ವಿವರ ನೀಡುವುದು)	ಕರ್ನಾಟಕ ಪಂಚಾಯತ್ ರಾಜ್ ಸಂಸ್ಥೆಗಳ ಚುನಾವಣೆಯಲ್ಲಿ ಸ್ಪರ್ಧಿಸಲು ಹಿಂದುಳಿದ ವರ್ಗಗಳಿಗೆ ಮೀಸಲಾತಿ ಕಲ್ಪಿಸಲು ಸರ್ಕಾರದ ಅಧಿಸೂಚನೆ ಸಂಖ್ಯೆ:ಗ್ರಾಅಪ 5 ಜಿಪಸ 95, ದಿನಾಂಕ: 13.01.1995ನ್ನು ಪ್ರಕಟಿಸಿರುತ್ತದೆ. ಈ ಅಧಿಸೂಚನೆಯಲ್ಲಿ ನಮೂದಿಸಿರುವ ಹಿಂದುಳಿದ ವರ್ಗ 'ಅ' ಮತ್ತು ಹಿಂದುಳಿದ ವರ್ಗ 'ಬ' ಎಂದು ವಿಂಗಡಿಸಿ ಅಧಿಸೂಚನೆಯಲ್ಲಿ ನಮೂದಿಸಲಾಗಿರುತ್ತದೆ. ಈ ಪಟ್ಟಿಯಲ್ಲಿ 'ಕುಂಬ್ರಿ ಮರಾಠಿ' ಎಂಬ ಸಮುದಾಯವನ್ನು ಗುರುತಿಸಿರುವುದಿಲ್ಲ.

ಸಂಖ್ಯೆ: ಹಿಂವಕ 335 ಬಿಸಿಎ 2021

(ಕೋಟಾ ಶ್ರೀನಿವಾಸ ಪೂಜಾರಿ)